ತೀರ ಕೆಟ್ಟುಹೋಗಿದೆ.'

'ಹಾಗನ್ನಬೇಡ. ಅಪ್ಪನಿಗೆ ಹೇಗಾಗಬಹುದು ಎಂದು ಗಮನದಲ್ಲಿಟ್ಟುಕೋ' ರೊಸಾಲಿಯ ಪಿಸುಗುಟ್ಟಿದಳು.

ಸಾರಾಳಿಗೆ ಆ ಪಿಯಾನೊದ ಮೇಲೆ ಕಣ್ಣು ಬಿದ್ದಾಗಲೆಲ್ಲ ಅವಳ ಮದುವೆಯ ರಾತ್ರಿ ತನ್ನ ಪ್ರಿಯಕರನ ಅಪ್ಪುಗೆಯಲ್ಲಿ, ಚುಂಬನಗಳ ನಡುವೆ ಹೊರಳಾಡಬಹುದಾದ ಹಾಸಿಗೆಯ ನೆನಪಾಗುತ್ತಿತ್ತು.

ದಿನಗಳು ಒಂದಾದ ಮೇಲೆ ಒಂದರಂತೆ ಸಾಗಿದರೂ ಯಾವ ಖರೀದಿದಾರನೂ ಬರಲಿಲ್ಲ. ಎಲ್ಲೋ ಒಮ್ಮೊಮ್ಮೆ, ವೈದ್ಯನೊಬ್ಬ ಮಾರಣಾಂತಿಕ ರೋಗಿಯ ಪರಿಸ್ಥಿತಿಯನ್ನು ವಿಚಾರಿಸುವವನ ಹಾಗೆ ಕೆಂಚುಗೂದಲಿನ ವ್ಯಕ್ತಿಯ ಕರೆಗಳು. ಜಾಹೀರಾತನ್ನು ಹಿಂಪಡೆಯಲಾಯಿತು.

'ಯಾವ್ವೋ, ಏನು ಮಾಡೋಣ ಅದನ್ನು?'

'ಏನು ಮಾಡೋಣ, ಯಾವುದನ್ನು, ರೊಸಾಲಿಯ?'

'ಪಿಯಾನೊವನ್ನು.'

ಯಾವ್ವೋ ಚೀರಿದ. 'ನಾನು ಅದನ್ನು ಮಾರುವುದಿಲ್ಲ. ಈ ಜಿಗಣೆಗಳು ಅದಕ್ಕೆ ಯಾವ ಕಿಮ್ಮತ್ತನ್ನೂ ಕೊಡುವುದಿಲ್ಲ. ಬರೇ ಚೌಕಾಶಿ ಮಾಡುತ್ತಾರೆ. ಅದರ ಮೌಲ್ಯ ಗೊತ್ತಿರುವವರಿಗೆ ಅದನ್ನು ಪುಕ್ಕಟೆಯಾಗಿ ಕೊಡಲೂ ನಾನು ಸಿದ್ಧನಿದ್ದೇನೆ. ಅವನು ಅದನ್ನು ಚೆನ್ನಾಗಿ ಇಟ್ಟುಕೊಳ್ಳಬಲ್ಲ.'

ಅವನು ತಲ್ಲಣದಿಂದ ಶತಪಥ ಹಾಕುತ್ತಿದ್ದ. ಇದ್ದಕ್ಕಿದ್ದಂತೆ ಅವನ ಮುಖಭಾವ ಬದಲಾಯಿತು.

'ರೊಸಾಲಿಯ, ಕೇಳಿಲ್ಲಿ. ತಿಝುಕಾದಲ್ಲಿರುವ ನಮ್ಮ ಸಂಬಂಧಿಕನಿಗೆ ಅದನ್ನು ಕೊಡೋಣ.'

ರೊಸಾಲಿಯಳಿಗೆ ಅವನ ಇರಾದೆ ತಿಳಿದು ಖುಷಿಯಾಯಿತು.

'ಹಲೋ ಮಸಾಯ ಇದ್ದಾನೆಯೇ? ಏನು ಹೊರಗೆ ಹೋಗಿದ್ದಾನೆಯೇ? ಓಹ್, ಇದು ಯಾರು ತಂಗಿ ಮಿಕಿತಾಳೇ? ನೋಡು... ನಮ್ಮ ಪಿಯಾನೊವನ್ನು ನಿಮಗೆ ಇನಾಮು ಕೊಡಬೇಕೆಂದಿದ್ದೇವೆ... ಹೌದು, ಇನಾಮಾಗಿ... ಅಲ್ಲ, ತಮಾಷೆಯಲ್ಲ... ನಿಜವಾಗಲೂ... ಒಳ್ಳೆಯದು... ನಿಜ ನಿಜ... ಅದು ಕುಟುಂಬದಿಂದ ಹೊರಗೆ ಹೋಗುವುದಿಲ್ಲ, ಅಲ್ಲವೇ? ಒಳ್ಳೆಯದು. ಆದಷ್ಟು ಬೇಗ ಕೊಂಡೊಯ್ಯಲು ಹೇಳು... ಖಂಡಿತ ಬನ್ನಿ... ನನಗದು ಇಷ್ಟವೇ...' ಅವನು ದೂರವಾಣಿಯನ್ನು ಕೆಳಗಿಟ್ಟು ಹೆಂಡತಿಯತ್ತ ತಿರುಗಿದ.

'ಗೊತ್ತಾ ನಿನಗೆ?' ಮೊದಲಿಗೆ ಆಕೆ ನಂಬಲಿಲ್ಲ. ಇಂದು ಮೂರ್ಖರ ದಿನಾಚರಣೆಯೇ ಎಂದುಕೊಂಡಳು. ರೊಸಾಲಿಯ ಖುಷಿಪಟ್ಟಳು. ಯಾವ್ವೋ ತಾನು ಈಗ ತಾನೇ ತೆಗೆದುಕೊಂಡ ನಿರ್ಧಾರವನ್ನು ತಿಳಿಸಲೆಂಬಂತೆ ಪಿಯಾನೊದ ಕಡೆಗೆ ನಡೆದ.

'ನನ್ನ ಮನಸ್ಸು ನಿಚ್ಚಳವಾಗಿದೆ. ನಿನ್ನನ್ನು ಅವರು ತಿರಸ್ಕರಿಸಲಾರರು. ನಮ್ಮ ಕುಟುಂಬದ ಒಳಗೇ ಇರುತ್ತಿ. ನಮ್ಮದೂ ಅವರದ್ದೂ ಒಂದೇ ರಕ್ತ. ನಮ್ಮ ಮಕ್ಕಳ ಮಕ್ಕಳಿಗೂ ಅದು ತಿಳಿಯುತ್ತದೆ. ಅವರು ನಿನ್ನನ್ನು ಗೌರವಿಸುತ್ತಾರೆ. ಅವರಿಗಾಗಿ ನೀನು ಸಂಗೀತ ನುಡಿಸುತ್ತಿ. ನಿನಗದು ಅರ್ಥವಾಗುತ್ತದೆ ಅಂತಂದುಕೊಳ್ಳುತ್ತೇನೆ. ಸಿಟ್ಟಾಗಬೇಡ' ಎಂದು ಮನಸ್ಸಿನಲ್ಲೇ ಹೇಳಿಕೊಂಡ.

'ಯಾವಾಗ ಬರುತ್ತಾರಂತೆ?' ರೊಸಾಲಿಯ ಹೊಸ ಮದುಮಕ್ಕಳಿಗೆ ಆ ಕೋಣೆ ತೆರವಾಗುವ ಬಗ್ಗೆ ಧಾವಂತ ಪಟ್ಟು ಮಧ್ಯೆ ಬಾಯಿ ಹಾಕಿದಳು.

ಮರುದಿನ ಮಸಾಯ ಇಪಾನೆಮದಲ್ಲಿದ್ದ ಈ ಸಂಬಂಧಿಗೆ ದೂರವಾಣಿ ಕರೆ ಮಾಡಿದ. ಅವರಿಗೊಂದು ಪಿಯಾನೊ ಕೊಡುತ್ತಿರುವುದು ನಿಜವೇ? ವಿಪರೀತವಾಯಿತು. ಆದರೂ ಅವನು ಕೃತಜ್ಞ. ಹಾಗೆ ಮಾಡುವುದು ಸರಿಯಲ್ಲ. ಹೆಂಡತಿ ಹೇಳಿದಾಗ ಅವನು ನಂಬಲೇ ಇಲ್ಲ.

'ಇಲ್ಲ ಮಸಾಯ. ನಿಜವಾಗಲೂ. ನಮ್ಮ ಮನೆ ತೀರ ಸಣ್ಣದೆಂದು ಗೊತ್ತು ತಾನೇ ನಿನಗೆ? ಇಲ್ಲಿ ಪಿಯಾನೊ ಇಡಲಾರೆವು. ಯಾವ್ವೋಗೆ ಅದನ್ನು ಯಾರ ಯಾರ ಕೈಯಲ್ಲಿಡಲು ಮನಸ್ಸಿಲ್ಲ. ನಿಮಗೆ ಕೊಟ್ಟರೆ ಅದು ನಮಗೇ ಕೊಟ್ಟಂತೆ ಅಲ್ಲವೇ? ಬೇಗ ಒಯ್ಯಲು ಯಾರನ್ನು ಕಳುಹಿಸುತ್ತಿ?'

ಕೆಲವು ದಿನಗಳು ಕಳೆದವು. ಆದರೆ, ಒಯ್ಯುವ ಯಾವ ವಾಹನವೂ ಬರಲಿಲ್ಲ. ತಿಝುಕಾದಲ್ಲಿರುವ ಸಂಬಂಧಿ ಬಾರದಿರುವುದು ದಂಪತಿಗಳಿಗೆ ವಿಚಿತ್ರವಾಗಿ ಕಂಡಿತು.

'ಏನೋ ಎಡವಟ್ಟಾಗಿರಬೇಕು. ರೊಸಾಲಿಯ, ಕರೆ